# ಸುಕೃತಾ ಹೊಸ ಗ್ರಾಫ್

‘ಮಾರ್ಟಿನ್’ ಸಿನಿಮಾ ಮೂಲಕ ಚಿತ್ರರಂಗಕ್ಕೆ ಮರಳಿರುವ ನಟಿ ಸುಕೃತಾ ವಾಗ್ಲೆ, ಸಿನಿಮಾರಂಗದಲ್ಲಿ ಮತ್ತೊಂದು ಮಜಲನ್ನು ಏರುವ ತಯಾರಿಯಲ್ಲಿದ್ದಾರೆ.

■ ಸುಮಲತಾ ಎನ್.



‘ಜಟ್ಟ’, ‘ಕಿರಗೂರಿನ ಗಯ್ಯಾಳಿಗಳು’ ಸಿನಿಮಾಗಳಲ್ಲಿ ತಮ್ಮ ಬೋಲ್ಡ್ ನಟನೆಯಿಂದಲೇ ಗಮನ ಸೆಳೆದವರು ನಟಿ ಸುಕೃತಾ ವಾಗ್ಲೆ. ಕನ್ನಡದೊಂದಿಗೆ, ತೆಲುಗು ಚಿತ್ರರಂಗದಲ್ಲಿಯೂ ತಮ್ಮ ಹೆಸರು ಛಾಪಿಸಿದ್ದ ಅವರು, ಕಳೆದ ಮೂರ್ನಾಲ್ಕು ವರ್ಷಗಳಿಂದ ಸಿನಿಮಾಗಳಿಂದ ದೂರವುಳಿದಿದ್ದರು.

ಇದೀಗ ‘ಮಾರ್ಟಿನ್’ ಸಿನಿಮಾ ಮೂಲಕ ಕನ್ನಡ ಚಿತ್ರರಂಗಕ್ಕೆ ಮರಳಿರುವ ಅವರು, ಹಲವು ಭರವಸೆಗಳನ್ನೂ ತಮ್ಮ ಜೊತೆಗಿಟ್ಟುಕೊಂಡಿದ್ದಾರೆ.

‘2018ರಲ್ಲಿ ತೆಲುಗು ಸಿನಿಮಾವೊಂದರಲ್ಲಿ ನಟಿಸಿದ ನಂತರ ನನಗೆ ಅಪಘಾತವಾಗಿತ್ತು. ಚೇತರಿಸಿಕೊಳ್ಳಲು ಏಳೆಂಟು ತಿಂಗಳು ಹಿಡಿಯಿತು. ಪಿಯುಸಿ ಮುಗಿಯುತ್ತಿದ್ದಂತೆ ಸಿನಿಮಾ ಕ್ಷೇತ್ರದೆಡೆಗೆ ಬಂದಿದ್ದವಳು ನಾನು. ಮುಕ್ತ ವಿವಿಯಲ್ಲಿ ಬಿ.ಎಸ್‌ಸಿ. ಹೋಟೆಲ್ ಮ್ಯಾನೇಜ್ಮೆಂಟ್ ಮಾಡಿದ್ದೆ. ಓದುತ್ತಲೇ ಸಿನಿಮಾಗಳಲ್ಲಿಯೂ ಮಾಡುತ್ತಿದ್ದೆ. ಆದರೆ ಅಪಘಾತದ ನಂತರ ಅಂತರ ಉಂಟಾಯಿತು. ಈ ಅವಧಿಯನ್ನು ಸಮರ್ಥವಾಗಿ ಬಳಸಿಕೊಳ್ಳಬೇಕೆಂದು ಎಲ್‌ಎಲ್‌ಬಿ ಕೋರ್ಸ್ ಮಾಡಲು ತೀರ್ಮಾನಿಸಿದೆ. ಪೋಷಕರು ಕೂಡ ಓದು ಮುಂದುವರೆಸು ಎಂದು ಬೆಂಬಲ ನೀಡಿದರು. ಕಾನೂನು ಪದವಿಯಲ್ಲಿಯೂ ಟಾಪ್ ಬಂದೆ’ ಎಂದು ವಿವರಿಸಿದರು ಸುಕೃತಾ.

ಅಪಘಾತದಿಂದ ಆರೋಗ್ಯ ಕೈಕೊಟ್ಟ ಕಾರಣ ಸಿನಿಮಾ ರಂಗದಿಂದ ದೂರವಾಗಿ, ಕಳೆದ ವರ್ಷವಷ್ಟೇ ಕಾನೂನು ಓದು ಮುಗಿಸಿದ್ದ ಅವರಿಗೆ ಅಚಾನಕ್ಕೆಂಬಂತೆ ಅವಕಾಶ ಹುಡುಕಿಕೊಂಡು ಬಂದಿತ್ತು.

‘ಮಾರ್ಟಿನ್’ ಸಿನಿಮಾದಲ್ಲಿ ನಟಿಸಲು ಸಹಿ ಹಾಕಿದ ಅವರು, ತೆಲುಗಿನ ವೆಬ್‌ಸೀರೀಸ್ ಒಂದರಲ್ಲೂ ಅಭಿನಯಿಸಿದರು. ಇದೇ ಏಪ್ರಿಲ್ ತಿಂಗಳಿನಲ್ಲಿ ವೆಬ್‌ಸೀರೀಸ್ ಬಿಡುಗಡೆಯಾಗಿದ್ದು, ಭಾರೀ ಮೆಚ್ಚುಗೆ ಗಿಟ್ಟಿಸಿಕೊಂಡಿದೆ. ‘ಮಾರ್ಟಿನ್’ನಲ್ಲಿನ ತಮ್ಮ ಅಭಿನಯ ಕೂಡ ಜನಮೆಚ್ಚುಗೆ ಗಳಿಸುವ ವಿಶ್ವಾಸ ಅವರದ್ದು.

‘ಮಾರ್ಟಿನ್ ಸಿನಿಮಾದಲ್ಲಿ ನನ್ನದು ನಿರ್ಣಾಯಕ ಪಾತ್ರ. ಇದೊಂದು ಪವರ್ ಪ್ಯಾಕ್ ಕಮರ್ಷಿಯಲ್ ಸಿನಿಮಾ. ಹಾಲಿವುಡ್ ಮಟ್ಟದ ಆ್ಯಕ್ಷನ್ ದೃಶ್ಯಗಳು ಈ ಸಿನಿಮಾದಲ್ಲಿವೆ. ನನ್ನದು ಪುಟ್ಟ ಪಾತ್ರವಾದರೂ ಬಹುಮುಖ್ಯವಾದದ್ದು’ ಎಂದು ತಮ್ಮ ಪಾತ್ರದ ವಿವರಣೆ ನೀಡಿದರು.

ಕಳೆದ ನಾಲ್ಕೈದು ವರ್ಷಗಳಲ್ಲಿ ಸಿನಿಮಾ ರಂಗದಲ್ಲಾಗಿರುವ ಬದಲಾವಣೆಗಳ ಕುರಿತು ಖುಷಿಯಿಂದ ಮಾತನಾಡುತ್ತಾರೆ ಅವರು.